I/451713/2023

**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಛೇರಿ,ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12**

**ಇ-ಮೇಲ್:commissioner.pue@gmail.com** **ಸ್ಥಿರ ದೂರವಾಣಿ ಸಂ:080-23562033**

# ವರ್ಗಾವಣಾ ಮಾರ್ಗಸೂಚಿ

ವಿಷಯ: 2023-24ನೇ ಸಾಲಿನ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ / ಉಪನ್ಯಾಸಕರ ವೃಂದದ ವರ್ಗಾವಣೆಗಳನ್ನು ಗಣಕೀಕೃತ ಕೌನ್ಸೆಲಿಂಗ್ ಮೂಲಕ ನಿರ್ವಹಿಸುವ ಬಗ್ಗೆ

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 12 ಶಾಸನ 2020, ದಿನಾಂಕ: 27/03/2020.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 47 ಶಾಸನ 2021, ದಿನಾಂಕ: 18/01/2022.
3. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಪಿ 32 ಟಿಪಿಯು 2021, ದಿನಾಂಕ: 12/05/2022.
4. ಸರ್ಕಾರದ ಪತ್ರ ಸಂಖ್ಯೆ: ಇಪಿ 84 ಎಸ್ ಹೆಚ್ ಹೆಚ್ 2023, ದಿನಾಂಕ: 27-06-2023.

* * *

"ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮಗಳು - 2020" ಮತ್ತು ಉಲ್ಲೇಖ-3ರ ನಿಯಮಗಳನ್ವಯ ಪ್ರಾಂಶುಪಾಲರ / ಉಪನ್ಯಾಸಕರ ವರ್ಗಾವಣೆಗಳನ್ನು ಗಣಕೀಕೃತ ಕೌನ್ಸೆಲಿಂಗ್ ಮೂಲಕ ನಡೆಸಲು ಅವಕಾಶ ಕಲ್ಪಿಸಲಾಗಿದೆ. ಅದರಂತೆ, 2023-24ನೇ ಸಾಲಿಗೆ ಪ್ರಾಂಶುಪಾಲರ / ಉಪನ್ಯಾಸಕರ ವರ್ಗಾವಣೆಗಳನ್ನು ಗಣಕೀಕೃತ ಕೌನ್ಸೆಲಿಂಗ್ ಮೂಲಕ ನಡೆಸಲು ಉಲ್ಲೇಖ-4ರಲ್ಲಿ ಸರ್ಕಾರವು ಅನುಮತಿಸಿರುತ್ತದೆ. ಈ ವರ್ಗಾವಣೆಗೆ ಅರ್ಜಿಗಳನ್ನು ಆನ್‌ಲೈನ್ (Online) ಮೂಲಕ ಮಾತ್ರ ಸಲ್ಲಿಸತಕ್ಕದ್ದು. ಖುದ್ದಾಗಿ ಅಥವಾ ಪತ್ರ

ಮುಖೇನ ಮೂಲಕ ಲಿಖಿತವಾಗಿ ಸಲ್ಲಿಸಿದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಮತ್ತು ಪರಿಗಣಿಸಲಾಗುವುದಿಲ್ಲ.

## I. <u>ಸಾಮಾನ್ಯ ಸೂಚನೆಗಳು:</u>

1) ವರ್ಗಾವಣಾ ಅಧಿನಿಯಮ ಮತ್ತು ನಿಯಮಗಳಲ್ಲಿ ನಿಗಧಿಪಡಿಸಿರುವ ವಿಧಿ ವಿಧಾನಗಳನ್ವಯ ಪ್ರಾಂಶುಪಾಲರ / ಉಪನ್ಯಾಸಕರ ವರ್ಗಾವಣೆಯನ್ನು ಗಣಕೀಕೃತ ಕೌನ್ಸೆಲಿಂಗ್ ಮೂಲಕ ನಡೆಸಲಾಗುವುದು.
2) ಉಪನ್ಯಾಸಕರ ವರ್ಗಾವಣೆಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ವರ್ಗಾವಣೆ ವಿಧಗಳಿವೆ:
    a. ಕೋರಿಕೆ ವರ್ಗಾವಣೆ.
    b. ಪರಸ್ಪರ ವರ್ಗಾವಣೆ.
    c. ಸಾರ್ವಜನಿಕ ಹಿತದೃಷ್ಠಿಯ ಮೇರೆಗೆ ವರ್ಗಾವಣೆ.

3) ವರ್ಗಾವಣೆಗಳಿಗೆ ನಿಗದಿಪಡಿಸಿರುವ ಮಿತಿಗಳು:

| ಕ್ರಮ ಸಂಖ್ಯೆ | ವರ್ಗಾವಣೆ ವಿಧ | ವರ್ಗಾವಣೆಗೆ ಮಿತಿಗಳು |
|---|---|---|
| 1 | ಕೋರಿಕೆ ವರ್ಗಾವಣೆ (ಸಾಮಾನ್ಯ) (ಪ್ರಾಂಶುಪಾಲರು) | ಶೇ. 10% |
| 2 | ಕೋರಿಕೆ ವರ್ಗಾವಣೆ (ಸಾಮಾನ್ಯ) (ಉಪನ್ಯಾಸಕರು) | ಶೇ. 10% (Percentage of the working strength of concerned category of Lecturer in the relevant subject) |

ಹೆಚ್ಚುವರಿ ವರ್ಗಾವಣೆಗಳನ್ನು ಉಪನ್ಯಾಸಕರ ವೃಂದಕ್ಕೆ 2 ವರ್ಷಗಳಿಗೆ ಒಮ್ಮೆ ಮಾತ್ರ ಕೈಗೊಳ್ಳಬೇಕಾಗಿದ್ದು, ಯಾವುದೇ ಸಾಲಿನಲ್ಲಿ ಹೆಚ್ಚುವರಿ ವರ್ಗಾವಣೆಗಳಿರುವಾಗ ಮೇಲಿನ ಶೇಕಡವಾರು ಉಪ ಮಿತಿಯ ವ್ಯಾಪ್ತಿಗೆ ಬರುವುದಿಲ್ಲ (ಹೆಚ್ಚುವರಿ ವರ್ಗಾವಣೆ ಪ್ರಾಂಶುಪಾಲರ ವೃಂದಕ್ಕೆ ಅನ್ವಯಿಸುವುದಿಲ್ಲ). 2022-23ನೇ ಸಾಲಿನಲ್ಲಿ ಹೆಚ್ಚುವರಿ ವರ್ಗಾವಣೆಯನ್ನು

ಕೈಗೊಂಡಿರುವುದರಿಂದ, ಪ್ರಸಕ್ತ ಸಾಲಿನಲ್ಲಿ ಹೆಚ್ಚುವರಿ ವರ್ಗಾವಣೆಯನ್ನು ನಿರ್ವಹಿಸಲಾಗುವುದಿಲ್ಲ.

4) ವರ್ಗಾವಣಾ ಅಧಿನಿಯಮದಂತೆ ಪರಿಭಾಷೆಗಳು:
   a) "ಕನಿಷ್ಠ ಅವಧಿ" ಎಂದರೆ, ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಸತತವಾಗಿ ಮೂರು ವರ್ಷಗಳ ಸೇವೆ ಸಲ್ಲಿಕೆ ("minimum period" means a continuous service of three years in a Government Pre-University College) ಎಂಬುದಾಗಿ ವ್ಯಾಖ್ಯಾನಿಸತಕ್ಕದ್ದು.
   b) ಉಪನ್ಯಾಸಕರ ಕಾರ್ಯಭಾರ: ಪ್ರಾಯೋಗಿಕ ವಿಷಯಗಳಿಗೆ ಸಂಬಂಧಿಸಿದಂತೆ, ವಿದ್ಯಾರ್ಥಿ-ಉಪನ್ಯಾಸಕರ ಅನುಪಾತವು ಪ್ರಾಯೋಗಿಕ ವಿಷಯಗಳಿಗೆ 160:1 ರಷ್ಟಿರಬೇಕು ಮತ್ತು ಪ್ರಾಯೋಗಿಕೇತರ ವಿಷಯಗಳಿಗೆ (ಭಾಷಾ ವಿಷಯಗಳನ್ನೊಳಗೊಂಡಂತೆ) ಈ ಅನುಪಾತವು 320:1 ರಷ್ಟಿರಬೇಕು.
   c) ಕಾರ್ಯಭಾರ ಅಂದರೆ, ವಾರದಲ್ಲಿ ಉಪನ್ಯಾಸಕರು ಪಾಠ ಮಾಡಬೇಕಿರುವ ಅವಧಿ. ಪ್ರಾಯೋಗಿಕ ವಿಷಯಗಳಿಗೆ ಸಂಬಂಧಿಸಿದಂತೆ ವಾರವೊಂದರಲ್ಲಿ 24 ಗಂಟೆಗಳು ಮತ್ತು ಪ್ರಾಯೋಗಿಕವಲ್ಲದ ವಿಷಯಗಳಿಗೆ ಸಂಬಂಧಿಸಿದಂತೆ ವಾರವೊಂದರಲ್ಲಿ 20 ಗಂಟೆಗಳು.

ಉದಾಹರಣೆಗೆ: ಎಂಭತ್ತು ವಿದ್ಯಾರ್ಥಿಗಳನ್ನು ಒಳಗೊಂಡ ಮತ್ತು ಎರಡು ವಿಭಾಗಗಳನ್ನು ಹೊಂದಿದ ವಿಜ್ಞಾನ ವಿಷಯಗಳಿಗೆ 08 ಗಂಟೆಗಳು ಪಾಠಕ್ಕೆ ಮತ್ತು 16 ಗಂಟೆಗಳು ಪ್ರಯೋಗಗಳಿಗೆ ನಿಗದಿಯಾಗಿರುತ್ತವೆ (ಪ್ರಾಯೋಗಿಕ ತರಗತಿಯಲ್ಲಿ 20 ವಿದ್ಯಾರ್ಥಿಗಳ ತಂಡಕ್ಕೆ 02 ಗಂಟೆಗಳು).

5) 2023-24ನೇ ಸಾಲಿಗೆ ವರ್ಗಾವಣೆ ಬಯಸುವ ಪ್ರಾಂಶುಪಾಲರು / ಉಪನ್ಯಾಸಕರು ಅಂತರ್ಜಾಲದ (Online) (pue.karnataka.gov.in) ಮೂಲಕ ಮಾತ್ರವೇ ಅರ್ಜಿ ಸಲ್ಲಿಸಬಹುದು. ಈ ವರ್ಗಾವಣೆಗೆ ಪರೀಕ್ಷಾರ್ಥ ಅವಧಿ [ಸೇವಾವಧಿ] ತೃಪ್ತಿಕರವಾಗಿ ಪೂರೈಸಿ ಘೋಷಿಸಲ್ಪಟ್ಟ ಉಪನ್ಯಾಸಕರು ಮಾತ್ರ ಅರ್ಹರಿರುತ್ತಾರೆ (ಪ್ರಾಂಶುಪಾಲರಿಗೆ ಅನ್ವಯಿಸುವುದಿಲ್ಲ).

6) ಆನ್-ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 20/07/2023.

7) ಅಮಾನತ್ತುಗೊಂಡ ನಂತರದಲ್ಲಿ ಶಿಸ್ತುಕ್ರಮ ಬಾಕಿ ಇರಿಸಿ ಅಮಾನತ್ತು ತೆರವುಗೊಳಿಸಿ ಸ್ಥಳನಿಯುಕ್ತಿಗೊಂಡ ಪ್ರಾಂಶುಪಾಲರು / ಉಪನ್ಯಾಸಕರು ವರ್ಗಾವಣೆಗೆ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.

8) ಕೋರಿಕೆ ಮೇರೆಗೆ ಅಥವಾ ಆದ್ಯತೆ ಅಡಿಯಲ್ಲಿ ವರ್ಗಾವಣೆಗೆ ಅರ್ಜಿ ಸಲ್ಲಿಸಿದ್ದಲ್ಲಿ ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸುವಂತಿಲ್ಲ ಅಥವಾ ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸಿದ್ದಲ್ಲಿ ಕೋರಿಕೆ ಅಥವಾ ಅದ್ಯತೆ ಅಡಿಯಲ್ಲಿ ವರ್ಗಾವಣೆಗೆ ಅರ್ಜಿ ಸಲ್ಲಿಸುವಂತಿಲ್ಲ. ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸುವಂತಿಲ್ಲ.

9) ಯಾವುದೇ ಆದ್ಯತೆ ಅಡಿಯಲ್ಲಿ ವರ್ಗಾವಣೆಗೆ ಅರ್ಜಿ ಸಲ್ಲಿಸಿದ್ದಲ್ಲಿ ಅದೇ ಆದ್ಯತೆ ಅಡಿಯಲ್ಲಿ ವರ್ಗಾವಣೆಗೆ ಮಾತ್ರ ಅವಕಾಶವಿರುತ್ತದೆ. ಕೌನ್ಸೆಲಿಂಗ್ ಸಮಯದಲ್ಲಿ ಆದ್ಯತೆ ಬದಲಾಯಿಸಲು ಅಥವಾ ಸಾಮಾನ್ಯ ವರ್ಗದಡಿಯಲ್ಲಿ ವರ್ಗಾವಣೆಗೆ ಅವಕಾಶವಿರುವುದಿಲ್ಲ.

10) ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು ಕರ್ನಾಟಕ ಮುನಿಸಿಪಲ್ ಕಾಯ್ದೆ, 1976 (1977 of Karnataka Act 14)ರಂತೆ ಕಾಲೇಜು ಯಾವ ವಲಯದ ವ್ಯಾಪ್ತಿಗೆ ಒಳಪಡುತ್ತದೆ ಎಂದು ಸಂಬಂಧಿಸಿದ ಪ್ರಾಧಿಕಾರಿಗಳಿಂದ ದೃಢೀಕರಣ ಪಡೆದುಕೊಳ್ಳತಕ್ಕದ್ದು.

11) ಕೌನ್ಸೆಲಿಂಗ್‌ಗೆ ಹಾಜರಾಗುವ ಪ್ರಾಂಶುಪಾಲರು ತಮ್ಮ ಬೋಧನಾ ವಿಷಯವಿರುವ ಕಾಲೇಜಿನ ಖಾಲಿ ಹುದ್ದೆಯನ್ನು ಆಯ್ಕೆ ಮಾಡಿಕೊಳ್ಳಬೇಕು. ಅಂಥ ಖಾಲಿ ಹುದ್ದೆ ಲಭ್ಯವಿರದ ಪಕ್ಷದಲ್ಲಿ ಯಾವುದೇ ಖಾಲಿ ಹುದ್ದೆಯನ್ನು ಆಯ್ಕೆ ಮಾಡಿಕೊಳ್ಳಬಹುದು.

12) ಕೌನ್ಸೆಲಿಂಗ್‌ಗೆ ಹಾಜರಾಗುವ ಉಪನ್ಯಾಸಕರು ಯಾವುದೇ ಖಾಲಿ ಹುದ್ದೆಯನ್ನು ಆಯ್ಕೆ ಮಾಡಿಕೊಳ್ಳಬಹುದು.

13) ಸೂಕ್ತ ಖಾಲಿ ಹುದ್ದೆ ದೊರೆಯದಿದ್ದ ಪಕ್ಷದಲ್ಲಿ ಪ್ರಾಂಶುಪಾಲರು / ಉಪನ್ಯಾಸಕರು ತಾವಿರುವ ಸ್ಥಳದಲ್ಲೇ ಮುಂದುವರಿಯಬಹುದು. ಇದಕ್ಕೆ ಸಂಬಂಧಿಸಿದಂತೆ, ಕೌನ್ಸೆಲಿಂಗ್ ಕೇಂದ್ರದಲ್ಲಿ ಪ್ರಾಂಶುಪಾಲರು / ಉಪನ್ಯಾಸಕರು ಮುಚ್ಚಳಿಕೆಯನ್ನು ನೀಡಬೇಕಾಗುತ್ತದೆ. ಒಮ್ಮೆ ಆಯ್ಕೆ ಮಾಡಿಕೊಂಡ ಸ್ಥಳದ ಬದಲಾವಣೆ ಅಥವಾ ಮಾರ್ಪಾಡಿಗೆ ಅವಕಾಶವಿಲ್ಲ.

14) ವರ್ಗಾವಣೆಯನ್ನು ನಿಗದಿಪಡಿಸಿರುವ ತಾತ್ಕಾಲಿಕ ವೇಳಾಪಟ್ಟಿಯಂತೆ ನಡೆಸಲಾಗುವುದು.

15) ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 12 ಶಾಸನ 2020, ದಿನಾಂಕ: 27/03/2020 ರಂತೆ ಕನಿಷ್ಠ ಸೇವಾವಧಿಯನ್ನು ಪೂರ್ಣಗೊಳಿಸದೇ ಇರುವ ಪ್ರಾಂಶುಪಾಲರು / ಉಪನ್ಯಾಸಕರು ವರ್ಗಾವಣೆಗೆ ಅರ್ಹರಾಗಿರುವುದಿಲ್ಲ.

16) 2021ರ ವರ್ಗಾವಣಾ ನಿಯಮ-17 ರಂತೆ ಆದ್ಯತಾ ಪಟ್ಟಿಯನ್ನು ಪ್ರಕಟಿಸಲಾಗುವುದು.

17) ಆದ್ಯತೆ ಬಯಸಿ ಅರ್ಜಿ ಸಲ್ಲಿಸುವವರು (ಕೋರಿಕೆ ವರ್ಗಾವಣೆ):

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ-2020ರನ್ವಯ ಹಾಗೂ ಅದರಡಿಯಲ್ಲಿ ರೂಪಿಸಲಾಗಿರುವ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಪ್ರಾಂಶುಪಾಲರ ಮತ್ತು ಉಪನ್ಯಾಸಕರ ವರ್ಗಾವಣೆ ನಿಯಂತ್ರಣ) ನಿಯಮಗಳು, 2022ರಲ್ಲಿನ ನಿಯಮ-11ರಲ್ಲಿ ನಿರ್ದಿಷ್ಟ ಪಡಿಸಿರುವಂತೆ ಪ್ರಮಾಣ ಪತ್ರಗಳನ್ನು ಸಂಬಂಧಿಸಿದ ಸಕ್ಷಮ ಪ್ರಾಧಿಕಾರದಿಂದ ಪಡೆದು ನಿಯಮ-17 ರಲ್ಲಿನ ಅವಕಾಶಗಳಂತೆ ಆದ್ಯತೆಯನ್ನು ಕೋರಿ ಅರ್ಜಿ ಸಲ್ಲಿಸತಕ್ಕದ್ದು.

ವರ್ಗಾವಣೆಗೆ ಸಂಬಂಧಪಟ್ಟಂತೆ ಆದ್ಯತಾ ಪ್ರಕರಣಗಳ ವಿವರ ಕೆಳಕಂಡಂತಿದೆ:

a) ಗಂಭೀರ ಸ್ವರೂಪದ ಖಾಯಿಲೆ ಪ್ರಕರಣಗಳು: ಅತ್ಯಂತ ತೀವ್ರತರವಾದ ಖಾಯಿಲೆಯ ಪ್ರಕರಣಗಳಲ್ಲಿ ಅಧಿನಿಯಮದ 10(1)ರಲ್ಲಿ ಸೂಚಿಸಿರುವಂತೆ ಪ್ರಾಂಶುಪಾಲರ / ಉಪನ್ಯಾಸಕರ ಅಥವಾ ಆತನ ಪತ್ನಿ ಅಥವಾ ಆಕೆಯ ಪತಿ (Spouse) ಅಥವಾ ಮಕ್ಕಳು, ಗಂಭೀರ ಖಾಯಿಲೆಯಿಂದ ಬಳಲುತ್ತಿದ್ದಲ್ಲಿ ಮತ್ತು ಅದಕ್ಕೆ ವೈದ್ಯಕೀಯ ಚಿಕಿತ್ಸೆಯು ಪ್ರಾಂಶುಪಾಲರು / ಉಪನ್ಯಾಸಕರು ಕಾರ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿ ದೊರೆಯದಿದ್ದಲ್ಲಿ ಮತ್ತು ಅವನು /ಅವಳಿಗೆ ವೈದ್ಯಕೀಯ ಚಿಕಿತ್ಸೆ ದೊರೆಯುವಂತಹ ಸ್ಥಳಕ್ಕೆ ವರ್ಗಾವಣೆ ಪಡೆಯುವುದು ಅವಶ್ಯಕವಾಗಿದ್ದಲ್ಲಿ, ಚಿಕಿತ್ಸೆಯ ಸ್ವರೂಪ, ಉಪನ್ಯಾಸಕರು ಕಾರ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿ ಸಂಬಂಧಪಟ್ಟ ಖಾಯಿಲೆಗೆ ವೈದ್ಯಕೀಯ ಚಿಕಿತ್ಸೆ ದೊರೆಯದೇ ಇರುವ ಬಗ್ಗೆ ಹಾಗೂ ಅಂತಹ ವೈದ್ಯಕೀಯ ಚಿಕಿತ್ಸೆ ದೊರೆಯುವ ಸ್ಥಳದ ಬಗ್ಗೆ ನಿರ್ದಿಷ್ಟವಾಗಿ ಜಿಲ್ಲಾ ವೈದ್ಯಕೀಯ ಮಂಡಳಿಯು ಪ್ರಮಾಣಿಸಲ್ಪಟ್ಟ ಪ್ರಸಕ್ತ ಸಾಲಿಗೆ ಚಾಲ್ತಿಯಲ್ಲಿರುವ ಪ್ರಮಾಣ ಪತ್ರವನ್ನು ಹಾಜರುಪಡಿಸಿದಲ್ಲಿ ಮಾತ್ರ ವೈದ್ಯಕೀಯ ಪ್ರಕರಣದಲ್ಲಿ ಪರಿಗಣಿಸಲಾಗುವುದು.

(ನಮೂನೆ-1) ಉದಾ|| ಹೃದಯ ಸಂಬಂಧಿ, ಕಿಡ್ನಿ, ಕ್ಯಾನ್ಸರ್ ಮತ್ತು ಹೆಚ್.ಐ.ವಿ. ಹಾಗೂ ಇತರೆ ಕೊನೆಯ ಹಂತದ ಖಾಯಿಲೆಗಳಿಂದ (Terminal Illness) ನರಳುತ್ತಿರುವವರಿಗೆ ಮಾತ್ರ ಈ ಪ್ರಕರಣದಡಿ ಅರ್ಜಿ ಸಲ್ಲಿಸಲು ಅವಕಾಶವಿದೆ.

ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿದಲ್ಲಿ ಯಾವುದೇ ಸೂಚನೆ ನೀಡದೇ ಇಂತಹವರ ವಿರುದ್ಧ ಶಿಸ್ತಿನ ಕ್ರಮ ಜರುಗಿಸಲಾಗುವುದು. ಪತಿ-ಪತ್ನಿ ಇಬ್ಬರೂ ಸರ್ಕಾರಿ ನೌಕರರಾಗಿದ್ದಲ್ಲಿ ಯಾರಾದರೂ ಒಬ್ಬರು ಮಾತ್ರ ವರ್ಗಾವಣೆಗೆ ಅರ್ಜಿ ಸಲ್ಲಿಸಲು ಅವಕಾಶವಿದೆ.

b) ವಿಕಲಚೇತನವುಳ್ಳ ಪ್ರಾಂಶುಪಾಲರ / ಉಪನ್ಯಾಸಕರ ಪ್ರಕರಣಗಳು: ವಿಕಲಚೇತನವುಳ್ಳ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016ರ (2016ರ ಕೇಂದ್ರ ಅಧಿ ನಿಯಮ 49) 2ನೇ ಪ್ರಕರಣದ(ಆರ್) ಖಂಡದಲ್ಲಿ ಪರಿಭಾಷಿಸಿದಂತೆ ಗುರುತಿಸಿದ ಮಟ್ಟದ ವಿಕಲಚೇತನವುಳ್ಳ (Bench Mark disability) ಪ್ರಾಂಶುಪಾಲರ / ಉಪನ್ಯಾಸಕರ ಅಥವಾ ಆತನ ಪತ್ನಿ ಅಥವಾ ಆಕೆಯ ಪತಿ (Spouse) ಅಥವಾ ಮಕ್ಕಳು, ವಿಕಲಚೇತನದ ಮೀಸಲಾತಿಯಲ್ಲಿ ನೇಮಕಾತಿ ಹೊಂದಿರಬೇಕು. ವಿಕಲಚೇತನವುಳ್ಳ ಪ್ರಕರಣಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಶಸ್ತ್ರಚಿಕಿತ್ಸಕರಿಂದ ಪ್ರಮಾಣೀಕರಿಸಲಾದಂತೆ ಶೇಕಡ 40ಕ್ಕಿಂತ ಹೆಚ್ಚಿನ ದೈಹಿಕ ಅಶಕ್ತತೆ ಇರುವ ಬಗ್ಗೆ ಜಿಲ್ಲಾ ಶಸ್ತ್ರ ವೈದ್ಯರು ಪ್ರಮಾಣೀಕರಿಸಿದ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು. ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿದಲ್ಲಿ ಯಾವುದೇ ಸೂಚನೆ ನೀಡದೆ ಇಂತಹವರ ವಿರುದ್ಧ ಶಿಸ್ತಿನಕ್ರಮ ಜರುಗಿಸಲಾಗುವುದು.

c) ವಿಧವಾ ಪ್ರಾಂಶುಪಾಲರ / ಉಪನ್ಯಾಸಕರ ಪ್ರಕರಣಗಳು: 12 ವರ್ಷಗಳ ಅವಲಂಬಿತ ಮಕ್ಕಳನ್ನು ಹೊಂದಿರುವ ವಿಧವೆ ಅಥವಾ ವಿಧುರ ಅಥವಾ ವಿಚ್ಛೇದಿತ ಪ್ರಾಂಶುಪಾಲರ / ಉಪನ್ಯಾಸಕರ ಪತಿಯ ಅಥವಾ ಪತ್ನಿಯ ಮರಣ ಸಮರ್ಥನಾ ಪ್ರಮಾಣ ಪತ್ರ ಅಥವಾ ವಿಧವಾ ಅಥವಾ ವಿಧುರ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದಾದರೂ ಒಂದು ಕಾನೂನಾತ್ಮಕ ದಾಖಲೆಯನ್ನು ಹಾಜರುಪಡಿಸುವುದು. ಜೊತೆಗೆ ಪತಿ-ಪತ್ನಿ ಕುರಿತಾಗಿ ಸೇವಾಪುಸ್ತಕದ ಉಧೃತಭಾಗ, ಚುನಾವಣಾ ಗುರುತಿನ ಚೀಟಿ, ಇತರೆ ಯಾವುದಾದರೂ ಕಾನೂನಾತ್ಮಕ ಗುರುತಿನಪತ್ರ.  ವಿಚ್ಛೇದನೆಯಾಗಿರುವ ಬಗ್ಗೆ ನ್ಯಾಯಾಲಯ ನೀಡಿರುವ ಡಿಕ್ರಿಪ್ರತಿ ಮತ್ತು ಮರು ಮದುವೆಯಾಗಿಲ್ಲದಿರುವ ಬಗ್ಗೆ ಹಾಗೂ ಅವಲಂಬಿತ ಮಕ್ಕಳಿರುವ ಬಗ್ಗೆ ಇತ್ತೀಚಿನ ದಿನಾಂಕದಂದು ಮ್ಯಾಜಿಸಸ್ಟ್ರೇಟ್ ನ್ಯಾಯಾಲಯದಿಂದ ಪಡೆದ ಘೋಷಣಾ ಪತ್ರವನ್ನುಸಲ್ಲಿಸತಕ್ಕದ್ದು.

d) ನಿವೃತ್ತ / ಮೃತ / ವಿಕಲಚೇತನವುಳ್ಳ ಸೈನಿಕ ಪ್ರಕರಣಗಳು: ಭಾರತೀಯ ರಕ್ಷಣಾಪಡೆ/ ಅರೆಮಿಲಿಟರಿ ಪಡೆಗಳಲ್ಲಿ (ಕೇಂದ್ರ ಗೃಹ ಮಂತ್ರಾಲಯವು ಕರೆಯುವ ಯಾವುದೇ ಹೆಸರಿನ ಸೈನಿಕರು) ಮೃತರಾಗಿರುವ ಅವಲಂಬಿತರಿಗೆ / ನಿವೃತ್ತರಾಗಿರುವ ಅವಲಂಬಿತರಿಗೆ / ಶಾಶ್ವತ ವಿಕಲಚೇತನವುಳ್ಳ ಸೈನಿಕರ ಪತಿ ಅಥವಾ ಪತ್ನಿರವರು (Spouse) ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರವನ್ನು ಹಾಜರುಪಡಿಸುವುದು.

I/451713/2023

e) ವಿವಾಹಿತ ಪ್ರಾಂಶುಪಾಲರ / ಉಪನ್ಯಾಸಕರ ಪ್ರಕರಣಗಳು: ಪತಿ ಮತ್ತು ಪತ್ನಿ ಇಬ್ಬರೂ ಸರ್ಕಾರಿ ನೌಕರರಾಗಿರುವ ಪ್ರಕರಣಗಳು: ರಾಜ್ಯ ಅಥವಾ ಕೇಂದ್ರ ಸರ್ಕಾರ ಅಥವಾ ಅನುದಾನಿತ ಶೈಕ್ಷಣಿಕ ಸಂಸ್ಥೆಯಲ್ಲಿ ಖಾಯಂ ಆಗಿ ಕಾರ್ಯ ನಿರ್ವಹಿಸುತ್ತಿರುವ ಪತಿ ಅಥವಾ ಪತ್ನಿ ಹೊಂದಿರುವ (Spouse) ಪ್ರಾಂಶುಪಾಲ / ಉಪನ್ಯಾಸ. ನೇಮಕಾತಿ ಪ್ರಾಧಿಕಾರಿಗಳಿಂದ ಪಡೆದ ದೃಢೀಕರಣ ಪತ್ರವನ್ನು ಪಡೆದು ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಪತಿ-ಪತ್ನಿ ಪ್ರಕರಣದಡಿ ಅರ್ಜಿ ಸಲ್ಲಿಸಿದ್ದಲ್ಲಿ ಪತಿ ಅಥವಾ ಪತ್ನಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿ ಹುದ್ದೆ ಖಾಲಿ ಇದ್ದಲ್ಲಿ, ಅಂತಹ ಸ್ಥಳವನ್ನೇ ಆಯ್ಕೆಮಾಡಿಕೊಳ್ಳತಕ್ಕದ್ದು. ಬೇರೆ ಸ್ಥಳ ಆಯ್ಕೆ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ. ಒಂದು ವೇಳೆ ಪತಿ ಅಥವಾ ಪತ್ನಿ ಕಾರ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿ ಹುದ್ದೆ ಖಾಲಿ ಇಲ್ಲದಿದ್ದಲ್ಲಿ ಅತಿ ಸಮೀಪದ ಖಾಲಿ ಇರುವ ಹುದ್ದೆಯನ್ನು ಆಯ್ಕೆ ಮಾಡಿಕೊಳ್ಳಬಹುದು. ಪತಿ ಅಥವಾ ಪತ್ನಿ ಒಂದೇ ತಾಲ್ಲೂಕಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಲ್ಲಿ, ಸದರಿ ಆದ್ಯತೆಯಡಿಯಲ್ಲಿ ಅರ್ಜಿಯನ್ನು ಸಲ್ಲಿಸಲು ಅವರು ಅರ್ಹರಾಗತಕ್ಕದ್ದಲ್ಲ.

- ಸರ್ಕಾರಿ ನೌಕರರು ಎಂಬುದಕ್ಕೆ ಕೆ.ಜಿ.ಐ.ಡಿ. ಸಂಖ್ಯೆ ಮತ್ತು ಹೆಚ್.ಆರ್.ಎಂ.ಎಸ್. ಹಾಗೂ ಸೇವಾ ದೃಢೀಕರಣ ಪ್ರತಿಯನ್ನು ಸಲ್ಲಿಸತಕ್ಕದ್ದು
- ರಾಜ್ಯ ಮತ್ತು ಕೇಂದ್ರ ಸರ್ಕಾರದ ಇಲಾಖೆಗಳು ಎಂಬುದಾಗಿ ಅಧಿಕೃತರಿಂದ ಪಡೆದ ಪ್ರಮಾಣ ಪತ್ರಗಳನ್ನು ಸಲ್ಲಿಸುವ ಪ್ರಕರಣಗಳು.

f) ಇತರೆ ಮಹಿಳಾ ಮತ್ತು ಪುರುಷ ಪ್ರಾಂಶುಪಾಲರ / ಉಪನ್ಯಾಸಕರ ಪ್ರಕರಣಗಳು.

18) ಪರಸ್ಪರ ವರ್ಗಾವಣೆ ಪ್ರಕರಣಗಳು:

ಎಲ್ಲಾ ಪರಸ್ಪರ ವರ್ಗಾವಣೆಗಳನ್ನು ಇಬ್ಬರೂ ಪ್ರಾಂಶುಪಾಲರ / ಉಪನ್ಯಾಸಕರ ಒಪ್ಪಿಗೆ ಇದ್ದಲ್ಲಿ ಮಾತ್ರ ಪರಿಗಣಿಸಲಾಗುವುದು ಹಾಗು ಪರಸ್ಪರ ವರ್ಗಾವಣೆ ಕೋರುವ ಉಪನ್ಯಾಸಕರಿಬ್ಬರೂ ಖಾಯಂ ಪೂರ್ವ ಸೇವಾವಧಿಯನ್ನು ತೃಪ್ತಿಕರವೆಂದು ಘೋಷಿಸಲ್ಪಟ್ಟಿರಬೇಕು.

a) ಪರಸ್ಪರ ವರ್ಗಾವಣೆ ಬಯಸುವ ಪ್ರಾಂಶುಪಾಲರು / ಉಪನ್ಯಾಸಕರು ವರ್ಗಾವಣೆಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ ಏಳು ವರ್ಷಗಳ ಕನಿಷ್ಠ

ಸೇವಾವಧಿಯನ್ನು ಪೂರೈಸಿರಬೇಕು. ನಿವೃತ್ತಿ ಪೂರ್ವದಲ್ಲಿ ಕನಿಷ್ಠ ಐದು ವರ್ಷಗಳ ಸೇವೆ ಬಾಕಿಯಿರಬೇಕು.

b) ಪರಸ್ಪರ ವರ್ಗಾವಣೆ ಬಯಸುವ ಉಪನ್ಯಾಸಕರು ಕೇವಲ ಒಬ್ಬರೊಂದಿಗೆ ಮಾತ್ರ ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸಬೇಕು. ಒಂದಕ್ಕಿಂತ ಹೆಚ್ಚು ಜನರೊಂದಿಗೆ ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸಿದ್ದಲ್ಲಿ, ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

c) ಈ ಹಿಂದೆ ಒಂದು ಬಾರಿ ಪರಸ್ಪರ ವರ್ಗಾವಣೆಯನ್ನು ಪಡೆದಿದ್ದಲ್ಲಿ ಅಂತಹ ಉಪನ್ಯಾಸಕರು ಪುನಃ ಪರಸ್ಪರ ವರ್ಗಾವಣೆಗೆ ಅರ್ಹರಾಗಿರುವುದಿಲ್ಲ.

d) ಪ್ರಾಂಶುಪಾಲರ ಹುದ್ದೆಗೆ ಸ್ಥಾನಪನ್ನ ಬಡ್ತಿ ಹೊಂದಲಿರುವ ಉಪನ್ಯಾಸಕರು ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.

19) ಅರ್ಜಿ ನಮೂನೆಯಲ್ಲಿ ಸೇವಾ ವಿವರ ನಮೂದಿಸುವಾಗ ಪ್ರಾಂಶುಪಾಲರ / ಉಪನ್ಯಾಸಕರ ವೃಂದದಲ್ಲಿ ಸಲ್ಲಿಸಿರುವ ಸೇವಾ ವಿವರವನ್ನು ಮಾತ್ರ ನಮೂದಿಸತಕ್ಕದ್ದು.

20) ಸರ್ಕಾರಿ ಅಧಿಸೂಚನೆ ಸಂಖ್ಯೆ: ಇಪಿ 32 ಟಿಪಿಯು 2021, ದಿನಾಂಕ: 12/05/2022 ಅನ್ನು ಇಲಾಖಾ ಅಂತರ್ಜಾಲ pue.karnataka.gov.in ದಲ್ಲಿ ಅಪ್‌ಲೋಡ್ ಮಾಡಿರುವುದನ್ನು ಡೌನ್‌ಲೋಡ್ ಮಾಡಿಕೊಂಡು ನಿಯಮಗಳನ್ನು ಪರಿಶೀಲಿಸಬಹುದು.

## II. ಗಣಕೀಕೃತ ಕೌನ್ಸೆಲಿಂಗ್ ವರ್ಗಾವಣೆಗೆ ಅಂತರ್ಜಾಲದ ಮೂಲಕ ಆನ್-ಲೈನ್ ನಲ್ಲಿ ಅರ್ಜಿ ಸಲ್ಲಿಸಲು / ಮಾಹಿತಿ ಭರ್ತಿ ಮಾಡುವ ಬಗ್ಗೆ ಸೂಚನೆಗಳು:

1) pue.karnataka.gov.in ವಿಳಾಸದಲ್ಲಿ ವರ್ಗಾವಣೆ 2023-24 link ಕ್ಲಿಕ್ ಮಾಡುವುದು. ಕ್ಲಿಕ್ ಮಾಡಿದ ನಂತರ ವರ್ಗಾವಣೆಗೆ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2020 ಮತ್ತು ಸರ್ಕಾರದ ವರ್ಗಾವಣಾ ನಿಯಮ ಅಧಿಸೂಚನೆ ಸಂಖ್ಯೆ: ಇಪಿ 32 ಟಿಪಿಯು 2021, ದಿನಾಂಕ: 12/05/2022 ನಿಯಮಗಳನ್ನು ಓದಿಕೊಳ್ಳುವುದು ಅಥವಾ ಡೌನ್‌ಲೋಡ್ ಮಾಡಿಕೊಳ್ಳಬಹುದು.

2) ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಸೂಚನೆಗಳ ಬಗ್ಗೆ ಈ ಕಛೇರಿ ಸುತ್ತೋಲೆ ಸಂಖ್ಯೆ: E-1097046 DPUE-EST10LTR/1/2023-PLCY ದಿನಾಂಕ:07.10.2023 ಲಿಂಕ್ ಕ್ಲಿಕ್ ಮಾಡಿ ಓದಿಕೊಳ್ಳುವುದು ಅಥವಾ ಡೌನ್‌ಲೋಡ್ ಮಾಡಿಕೊಂಡು ಓದಿಕೊಳ್ಳಬಹುದು. ಅದರಂತೆ, ಆನ್‌ಲೈನ್ ಮೂಲಕ ವರ್ಗಾವಣೆಗೆ ಅರ್ಜಿ ಸಲ್ಲಿಸುವುದು.

3) ಆನ್-ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 20/07/2023.
4) ಆನ್‌ಲೈನ್ ಮೂಲಕ ಭರ್ತಿ ಮಾಡಲಾದ ಅರ್ಜಿಗಳನ್ನು ಈ ನಿರ್ದೇಶನಾಲದಲ್ಲಿ ನಿಯಮಾನುಸಾರ ಪರಿಶೀಲಿಸಲಾಗುವುದು. ಪರಿಶೀಲಿಸಿದ ನಂತರ ತಾತ್ಕಾಲಿಕ ಪಟ್ಟಿಯನ್ನು ದಿನಾಂಕ: 01/08/2023 ರಂದು ಪ್ರಕಟಿಸಲಾಗುವುದು.
5) ತಾತ್ಕಾಲಿಕ ಪಟ್ಟಿಗೆ ಆಕ್ಷೇಪಣೆಗಳನ್ನು ದಿನಾಂಕ: 06/08/2023 ರ ಒಳಗಾಗಿ ಜಂಟಿ ನಿರ್ದೇಶಕರು (ಆಡಳಿತ), ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, ಬೆಂಗಳೂರು-560012, ಇವರಿಗೆ ಇ-ಮೇಲ್ ಮೂಲಕ dpuetransfer22@gmail.com ಈ ವಿಳಾಸಕ್ಕೆ ಸಲ್ಲಿಸುವುದು.
6) ಪ್ರಕಟಿಸಲಾಗುವ ನಿಗದಿತ ಆದ್ಯತಾ ಪಟ್ಟಿಗೆ ಆಕ್ಷೇಪಣೆಗಳನ್ನು ಪೂರಕ ದಾಖಲೆಗಳೊಂದಿಗೆ ನಿಗದಿತ ದಿನಾಂಕದೊಳಗೆ ಸಲ್ಲಿಸತಕ್ಕದ್ದು. ಸದರಿ ದಿನಾಂಕದ ನಂತರ ಸಲ್ಲಿಸಲ್ಪಡುವ ಯಾವುದೇ ಆಕ್ಷೇಪಣೆಗಳನ್ನು ಪುರಸ್ಕರಿಸಲಾಗುವುದಿಲ್ಲ.
7) ಸ್ವೀಕೃತಗೊಂಡ ಆಕ್ಷೇಪಣೆಗಳನ್ನು ಪರಿಶೀಲಿಸಿ, ಪರಿಗಣಿಸಿದ ನಂತರ ಅಂತಿಮ ಪಟ್ಟಿಯನ್ನು ದಿನಾಂಕ: 07/08/2023 ರಂದು ಪ್ರಕಟಿಸಲಾಗುವುದು.
8) ಕೌನ್ಸೆಲಿಂಗ್ ದಿನಾಂಕಗಳು ಅನಿವಾರ್ಯ ಸಂದರ್ಭಗಳಲ್ಲಿ ಬದಲಾವಣೆಯ ಷರತ್ತಿಗೆ ಒಳಪಟ್ಟಿದಲ್ಲಿ, ಹೆಚ್ಚಿನ ಮಾಹಿತಿಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ನೀಡಲಾಗುವುದು.

**III.** ಗಣಕೀಕೃತ ಕೌನ್ಸೆಲಿಂಗ್ ವರ್ಗಾವಣೆಗೆ ಅಂತರ್ಜಾಲದ ಮೂಲಕ ಆನ್-ಲೈನ್ ನಲ್ಲಿ ಅರ್ಜಿ ಭರ್ತಿ ಮಾಡುವಾಗ ಕಡ್ಡಾಯವಾಗಿ ಇಂದೀಕರಿಸಲು UPLOAD ಬೇಕಾದ ದಾಖಲೆಗಳು:

1) ಪರೀಕ್ಷಾರ್ಥ ಸೇವಾವಧಿ ತೃಪ್ತಿಕರವಾಗಿ ಪೂರೈಸಿದ ಬಗ್ಗೆ ಉಪನ್ಯಾಸಕರ ಹುದ್ದೆಯಲ್ಲಿ ಘೋಷಿಸಿದ ಆದೇಶದ ಪ್ರತಿ. ಆದೇಶದ ಪ್ರತಿ ಲಭ್ಯವಿಲ್ಲದಿದ್ದಲ್ಲಿ ಸೇವಾಪುಸ್ತಕದಲ್ಲಿ ನಮೂದಿಸಿರುವ ದಾಖಲೆ ಆಧಾರದ ಮೇಲೆ ಪ್ರಾಚಾರ್ಯರಿಂದ ಪರೀಕ್ಷಾರ್ಥ ಅವಧಿ ಪೂರೈಸಿರುವ ಬಗ್ಗೆ ಮೂಲ ಪ್ರಮಾಣಪತ್ರ ಸಲ್ಲಿಸಬೇಕು. ಪರೀಕ್ಷಾರ್ಥ ಸೇವಾವಧಿ ತೃಪ್ತಿಕರವಾಗಿ ಘೋಷಿಸಿದ ಬಗ್ಗೆ ದೃಢೀಕರಣ (ನಮೂನೆ-1). ಪರೀಕ್ಷಾರ್ಥ ಸೇವಾವಧಿ ತೃಪ್ತಿಕರವಾಗಿ ಘೋಷಿಸಿದ ಬಗ್ಗೆ ದೃಢೀಕರಣ ಪ್ರಾಂಶುಪಾಲರಿಗೆ ಅನ್ವಯಿಸುವುದಿಲ್ಲ ಬದಲಾಗಿ ಸೇವಾ ದೃಢೀಕರಣ ನಮೂನೆ-1ನ್ನು Upload ಮಾಡುವುದು.

2) ತೃಪ್ತಿಕರ ಸೇವೆ ಸಲ್ಲಿಸಿರುವ ಕುರಿತು ಉಪನ್ಯಾಸಕರು ಪ್ರಾಂಶುಪಾಲರಿಂದ ಮತ್ತು ಪ್ರಾಂಶುಪಾಲರು ಉಪ ನಿರ್ದೇಶಕರಿಂದ ದೃಢೀಕರಿಸಿ, ನೀಡಿರುವ ಮೂಲ ಪ್ರಮಾಣ ಪತ್ರ (ನಮೂನೆ-2).
3) ಅತ್ಯಂತ ತೀವ್ರತರವಾದ ಖಾಯಿಲೆಯ ಪ್ರಕರಣಗಳಲ್ಲಿ ವೈದ್ಯಕೀಯ ಆದ್ಯತೆ ಕೋರಿದ್ದಲ್ಲಿ ಜಿಲ್ಲಾ ವೈದ್ಯಕೀಯ ಮಂಡಳಿ ನೀಡಿರುವ ಮೂಲ ವೈದ್ಯಕೀಯ ಪ್ರಮಾಣ ಪತ್ರ ಹಾಜರುಪಡಿಸುವುದು (ನಮೂನೆ-3) ಉದಾ: ಹೃದಯ ಸಂಬಂಧಿ, ಕಿಡ್ನಿ, ಕ್ಯಾನ್ಸರ್ ಮತ್ತು ಹೆಚ್.ಐ.ವಿ. ಹಾಗೂ ಇತರೆ ಕೊನೆಯ ಹಂತದ ಖಾಯಿಲೆಗಳಿಂದ (Terminal Illness) ನರಳುತ್ತಿರುವವರಿಗೆ ಮಾತ್ರ ಈ ಪ್ರಕರಣದಡಿ ಅರ್ಜಿ ಸಲ್ಲಿಸಲು ಅವಕಾಶವಿದೆ. ಸುಳ್ಳು ಪ್ರಮಾಣ ಪತ್ರಗಳನ್ನು ಸಲ್ಲಿಸಿದಲ್ಲಿ ಯಾವುದೇ ಸೂಚನೆ ನೀಡದೇ ಶಿಸ್ತಿನಕ್ರಮ ಜರುಗಿಸಲಾಗುವುದು.
4) ವಿಕಲಚೇತನವುಳ್ಳ ಪ್ರಕರಣಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಶಸ್ತ್ರ ಚಿಕಿತ್ಸಕರಿಂದ ಪ್ರಮಾಣೀಕರಿಸಲಾದಂತೆ ಶೇಕಡ 40 ಕ್ಕಿಂತ ಹೆಚ್ಚಿನ ದೈಹಿಕ ಅಶಕ್ತತೆ ಇರುವ ಬಗ್ಗೆ ಜಿಲ್ಲಾ ಶಸ್ತ್ರವೈದ್ಯರು ಪ್ರಮಾಣೀಕರಿಸಿದ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು. ಅಂಗವಿಕಲ ಆದ್ಯತೆ ಕೋರಿದ್ದಲ್ಲಿ ಶೇಕಡ 40 ಕ್ಕಿಂತ ಹೆಚ್ಚಿನ ಅಶಕ್ತತೆ ಹೊಂದಿರುವ ಜಿಲ್ಲಾ ಶಸ್ತ್ರಚಿಕಿತ್ಸಕರು ನೀಡಿರುವ ಮೂಲ ಪ್ರಮಾಣ ಪತ್ರ (ವರ್ಗಾವಣೆಗೆ ಈ ಆದ್ಯತೆ ಕೋರಿದ್ದಲ್ಲಿ).
5) ಪತಿಯ ಅಥವಾ ಪತ್ನಿಯ ಮರಣ ಸಮರ್ಥನಾ ಪ್ರಮಾಣ ಪತ್ರ ಅಥವಾ ವಿಧವಾ ಅಥವಾ ವಿಧುರ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದಾದರೂ ಒಂದು ಕಾನೂನಾತ್ಮಕ ದಾಖಲೆಯನ್ನು ಹಾಜರುಪಡಿಸುವುದು. ಜೊತೆಗೆ ಪತಿ-ಪತ್ನಿ ಕುರಿತಾಗಿ ಸೇವಾಪುಸ್ತಕದ ಉಧೃತಭಾಗ, ಚುನಾವಣಾ ಗುರುತಿನ ಚೀಟಿ, ಇತರೆ ಯಾವುದಾದರೂ ಕಾನೂನಾತ್ಮಕ ಗುರುತಿನ ಪತ್ರ. ವಿಚ್ಛೇದನೆಯಾಗಿರುವ ಬಗ್ಗೆ ನ್ಯಾಯಾಲಯ ನೀಡಿರುವ ಡಿಕ್ರಿ ಪ್ರತಿ ಮತ್ತು ಮರು ಮದುವೆಯಾಗಿಲ್ಲದಿರುವಬಗ್ಗೆ ಹಾಗೂ ಅವಲಂಬಿತ ಮಕ್ಕಳಿರುವ ಬಗ್ಗೆ ಇತ್ತೀಚಿನ ದಿನಾಂಕದಂದು ಮ್ಯಾಜಿಸ್ಟ್ರೇಟ್ ನ್ಯಾಯಾಲಯದಿಂದ ಪಡೆದ ಘೋಷಣಾ ಪತ್ರವನ್ನು ಸಲ್ಲಿಸತಕ್ಕದ್ದು.
6) ಸೈನಿಕ ಸೇವೆಯ ಆದ್ಯತೆ ಪಡೆದಿದ್ದಲ್ಲಿ ಸೂಕ್ತ ಪ್ರಾಧಿಕಾರ ನೀಡಿರುವ ಮೂಲ ಸಮರ್ಥನಾ ಪ್ರಮಾಣ ಪತ್ರ. (ಅಂದರೆ, ಭಾರತೀಯ ರಕ್ಷಣಾಪಡೆ / ಅರೆಮಿಲಿಟರಿ ಪಡೆಗಳಲ್ಲಿ (ಕೇಂದ್ರ ಸರ್ಕಾರದ ಗೃಹ ಮಂತ್ರಾಲಯವು ಕರೆಯುವ ಯಾವುದೇ ಹೆಸರಿನ ಸೈನಿಕರು) ಕಾರ್ಯನಿರ್ವಹಿಸುತ್ತಿರುವ / ಮೃತರಾಗಿರುವ / ನಿವೃತ್ತರಾಗಿರುವ / ಶಾಶ್ವತ ಅಂಗವಿಕಲ ಸೈನಿಕರ ಪತಿ ಅಥವಾ ಪತ್ನಿ - ಮಿಲಿಟರಿ ಸೇವೆಯಲ್ಲಿರುವ ಬಗ್ಗೆ. ಮೃತರಾಗಿರುವ ಬಗ್ಗೆ. ನಿವೃತ್ತರಾಗಿರುವ ಬಗ್ಗೆ ಶಾಶ್ವತ ಅಂಗವಿಕಲ ಹೊಂದಿರುವ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದ ಮೂಲ ಪ್ರಮಾಣ ಪತ್ರವನ್ನು ತರತಕ್ಕದ್ದು (ವರ್ಗಾವಣೆಗೆ ಈ ಆದ್ಯತೆ ಕೋರಿದ್ದಲ್ಲಿ).

7) ಪತಿ-ಪತ್ನಿ ಪ್ರಕರಣದಲ್ಲಿ ಆದ್ಯತೆ ಪಡೆದಿದ್ದಲ್ಲಿ ನಿಗದಿಪಡಿಸಿದ ನಮೂನೆ-4 ರಲ್ಲಿ ಪತಿ / ಪತ್ನಿ ಕಾರ್ಯ ನಿರ್ವಹಿಸುತ್ತಿರುವ ಇಲಾಖೆ / ಕಚೇರಿ / ಸಂಸ್ಥೆಯಿಂದ ಪಡೆದ ಮೂಲ ಪ್ರಮಾಣ ಪತ್ರ (ವರ್ಗಾವಣೆಗೆ ಈ ಆದ್ಯತೆ ಕೋರಿದ್ದಲ್ಲಿ).
8) ಕೌನ್ಸೆಲಿಂಗ್‌ಗೆ ಹಾಜರಾಗುವ ಪ್ರಾಂಶುಪಾಲರು / ಉಪನ್ಯಾಸಕರು ಕಡ್ಡಾಯವಾಗಿ ಇಲಾಖೆಯು ನೀಡಿರುವ ಭಾವಚಿತ್ರವುಳ್ಳ ಗುರುತಿನ ಸೇವಾ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ತರತಕ್ಕದ್ದು.
9) ಆನ್‌ಲೈನ್‌ನಲ್ಲಿ ಇಂದೀಕರಿಸಲಾದ ಅನ್ವಯಿಸುವ ದಾಖಲೆಗಳ ಪ್ರತಿಗಳನ್ನು ಕೌನ್ಸೆಲಿಂಗ್ ಸಮಯದಲ್ಲಿ ಹಾಜರುಪಡಿಸದೇ ಇದ್ದಲ್ಲಿ, ಕೌನ್ಸೆಲಿಂಗ್‌ಗೆ ಹಾಜರಾಗುವ ಅವಕಾಶ ನೀಡದೇ ತಿರಸ್ಕರಿಸಲಾಗುವುದು.

**ವಿಶೇಷ ಸೂಚನೆ:** ವರ್ಗಾವಣೆಗೆ ಸಂಬಂಧಿಸಿದಂತೆ, ಯಾವುದೇ ಸುಳ್ಳು / ತಪ್ಪು ಮಾಹಿತಿ ನೀಡಿದ್ದಲ್ಲಿ, ಶಿಸ್ತು ಕ್ರಮಕ್ಕೆ ಗುರಿಪಡಿಸಲಾಗುವುದು. ಒಮ್ಮೆ ನಮೂದಿಸಿದ ಕೆ.ಜಿ.ಐ.ಡಿ. ಸಂಖ್ಯೆಯನ್ನು ಮತ್ತೊಮ್ಮೆ ಪುನರಾವರ್ತನೆ ಮಾಡಿ ವರ್ಗಾವಣೆಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ. ಅರ್ಜಿ ಸಲ್ಲಿಸಿದ ಸಮಯದಲ್ಲಿ ಪ್ರತಿಯೊಂದು ಅಂಶದ ಬಗ್ಗೆ ಮನವರಿಕೆ ಮಾಡಿಕೊಂಡು ನಮೂದು ಮಾಡಲು ಸೂಚಿಸಿದೆ.

**IV.** ಎ, ಬಿ ಮತ್ತು ಸಿ ವಲಯಗಳ ವರ್ಗೀಕರಣ ಮಾನದಂಡ:

| ಕ್ಷೇತ್ರ | ಕಾಲೇಜಿನ ವರ್ಗ | ವರ್ಗೀಕರಣದ ಮಾನದಂಡ | ಪ್ರತಿ ವರ್ಷದ ಪೂರ್ಣ ಸೇವೆಗೆ ನಿಗದಿಪಡಿಸಿದ ಮಾನದಂಡ |
|---|---|---|---|
| ನಗರ ಪ್ರದೇಶ | ಎ ವರ್ಗ (ಎ ವಲಯ) | ಬೆಂಗಳೂರು ಮಹಾನಗರಪಾಲಿಕೆ, ಎಲ್ಲಾ ಮಹಾನಗರಪಾಲಿಕೆಗಳು ಮತ್ತು ಜಿಲ್ಲಾ ಕೇಂದ್ರ ಸ್ಥಾನಗಳು. | 1.00 |
| | ಬಿ ವರ್ಗ (ಬಿ ವಲಯ) | ಎಲ್ಲಾ ನಗರಪಾಲಿಕೆಗಳು, ನಗರಸಭೆಗಳು, ಪುರಸಭೆಗಳು, ಪಟ್ಟಣ ಪಂಚಾಯತ್‌ಗಳು, ಅನುಸೂಚಿತ ಪ್ರದೇಶಗಳು ಮತ್ತು ತಾಲ್ಲೂಕು ಕೇಂದ್ರ ಸ್ಥಾನಗಳು (ಕರ್ನಾಟಕ ಮುನಿಸಿಪಲ್ ಕಾಯ್ದೆ, 1976 (1977 of Karnataka Act14). | 2.00 |

| | | | |
|---|---|---|---|
| ಗ್ರಾಮಾಂತರ ಪ್ರದೇಶ | ಸಿ ವರ್ಗ (ಸಿ ವಲಯ) | ಎ ಮತ್ತು ಬಿ ವರ್ಗದ ಪ್ರದೇಶಗಳನ್ನು ಹೊರತುಪಡಿಸಿ ಇನ್ನುಳಿದ ಎಲ್ಲಾ ಗ್ರಾಮಾಂತರ ಪ್ರದೇಶಗಳು | 3.00 |

Signed by Sindhu B Rupesh
Date: 10-07-2023 21:25:53
Reason: Approved

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಇವರಿಗೆ,

1. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರುಗಳಿಗೆ - ಈ ಬಗ್ಗೆ ತಮ್ಮ ಜಿಲ್ಲೆಯಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ / ಉಪನ್ಯಾಸಕರ ಗಮನಕ್ಕೆ ತರಲು ಅಗತ್ಯ ಕ್ರಮಕೈಗೊಳ್ಳಲು ಸೂಚಿಸಿದೆ.
2. ಸಹಾಯಕ ನಿರ್ದೇಶಕರು - ಇ-ಆಡಳಿತ, ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ - ಅಂತರ್ಜಾಲದಲ್ಲಿ ಮಾಹಿತಿಗಳನ್ನು ಅಳವಡಿಸುವ ಬಗ್ಗೆ ಮತ್ತು ಅಗತ್ಯ ಕ್ರಮಕ್ಕೆ ಹಾಗೂ ಕೌನ್ಸೆಲಿಂಗ್ ಸಿದ್ಧತೆ ಮತ್ತು ಸಹಕಾರಕ್ಕಾಗಿ.
3. ರಾಜ್ಯದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ / ಉಪನ್ಯಾಸಕರಿಗೆ.

ಪ್ರತಿಯನ್ನು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು - 560 0001 - ಇವರ ಅವಗಾಹನೆಗೆ ಸಲ್ಲಿಸಿದೆ.
2. ಆಪ್ತಕಾರ್ಯದರ್ಶಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವರು, ವಿಧಾನಸೌಧ, ಬೆಂಗಳೂರು - 560 0001 - ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ನಿರ್ದೇಶಕರ ಆಪ್ತಶಾಖೆಗೆ - ಮಾಹಿತಿಗಾಗಿ.
4. ಜಂಟಿ ನಿರ್ದೇಶಕರು (ಆಡಳಿತ), ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, - ಕೌನ್ಸೆಲಿಂಗ್ ಮೇಲುಸ್ತುವಾರಿಗಾಗಿ.
5. ಉಪ ನಿರ್ದೇಶಕರು (ಆಡಳಿತ), ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, - ಕೌನ್ಸೆಲಿಂಗ್ ಮೇಲುಸ್ತುವಾರಿಗಾಗಿ.
6. ಕಚೇರಿ / ಹೆಚ್ಚುವರಿ ಪ್ರತಿ.